ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿ ನಿರ್ವಹಿಸುತ್ತ ಕನ್ನಡ ಸಾಹಿತ್ಯ ಮತ್ತು ಯಕ್ಷಗಾನ ಕಲೆಯ ಬಗ್ಗೆ ಒಲವು ಬೆಳೆಸಿಕೊಂಡ ರವಿ ಮಡೋಡಿ ಅವರು ಶಿವಮೊಗ್ಗ ಜಿಲ್ಲೆಯ ಹೊಸನಗರದವರು. ಪ್ರಸ್ತುತ ಬೆಂಗಳೂರು ನಿವಾಸಿ. ಓದುವ ಹವ್ಯಾಸದಿಂದ ಬರವಣಿಗೆಯತ್ತ ಹೊರಳಿದ ಅವರು, ತಂತ್ರಜ್ಞಾನ ಕೌಶಲವನ್ನು ಯಕ್ಷಗಾನ ಕ್ಷೇತ್ರಕ್ಕೆ ಅನ್ವಯಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮೊಬೈಲ್ ಆ್ಯಪ್ ಮೂಲಕ ಯಕ್ಷಗಾನ ಪ್ರಸಂಗಗಳನ್ನ ಡಿಜಿಟಲೀಕರಣ ಮಾಡಿ ಉದಯೋನ್ಮುಖ ಕಲಾವಿದರಿಗೆ ಪ್ರಸಂಗಗಳು ಸುಲಭವಾಗಿ ಸಿಗುವಂತೆ ಮಾಡಿದ್ದಾರೆ. 'ಮಲೆನಾಡಿನ ಯಕ್ಷ ಚೇತನಗಳು' ಕೃತಿ ಪ್ರಕಟವಾಗಿದೆ.

ಬೇರೆ ಕಡೆ ಯಾರಾದ್ರು ಜಾಸ್ತಿ ಕೊಡ್ತ್ರೆ ಖುಷಿಯಿಂದ ಹೋಗು ಮಾರಾಯ' ಎಂದು ಕಡ್ಡಿ ತುಂಡು ಮಾಡಿದ ಹಾಗೆ ಮಾತನ್ನು ಆಡಿದ್ದರು. ಹೆಗಡೆಯವರು ಹೋಗಲಿ ಪಾಪ ಎಂದಿದ್ದು ಬೊಮ್ಮನಿಗೆ ಯಾಕೋ ಇಷ್ಟವಾಗದೆ ಸ್ವಾಭಿಮಾನವನ್ನು ಕೆಣಕಿದಂತಾಗಿತ್ತು. 'ಹೆಗ್ಡೇರೇ, ತನಗೆ ಎಪ್ಪತ್ತು ವರುಷದ ಇರಬೈದು. ಆದರೆ ಯಾವತ್ತಾದ್ರು, ಯಾವ ಕೆಲಸದಲ್ಲಾದ್ರೂ ಕಳ್ ಬಿದ್ದುದ್ದು ಐತಾ. ಅಥ್ವ ಸಂಜೆ ಆರುಗಂಟೆ ಆಗುವುದನ್ನೇ ಕಾಯ್ತು ಕೂತ್ಗಂಡು ಕೆಲಸ ಮಾಡಿನ? ಇಷ್ಟು ದಿನ ಕೆಲ್ಸುವ ನಮ್ಮನಿ ಕೆಲಸ ಅಂತ ಮಾಡ್ತ ಇದ್ದಿದ್ದಕ್ಕೆ ನೀವ್ ಒಳ್ಳೆ ಮಾತ್ ಆಡಿದ್ರಿ ಬಿಡಿ. ಇದನೆಲ್ಲ ದೇವರು ಕಾಂತ' ಎನ್ನುತ್ತ ಒಂದು ಹಂತದವರೆಗೆ ಭಾವುಕನಾಗಿದ್ದನ್ನು ತೋರಿಸದೆ ಮಾತನ್ನು ಆಡುತ್ತಿದ್ದ. ಆದರೆ ಅದು ಒಮ್ಮೆಗೆ ನಿಯಂತ್ರಣ ತಪ್ಪಿಬಿಟ್ಟಿತು. ಮತ್ತೆ ಅವನೇ ಮಾತನ್ನು ಮುಂದುವರೆಸಿ ದೊಡ್ಡದಾಗಿ, 'ಹೆಗ್ಡೇರೇ, ನಿಮ್ಗೆ ಅಡಿಕೆ ಕಾಯ್ ದುಡ್ಡು ನೆತ್ತಿಗೆ ಮುಟ್ಟೈತೆ ಇರ್ಬಕು. ಅದು ಕುಣಿಸ್ತೈತೆ. ನೀವ್ ಕುಣಿತ್ತಿರಿ. ಹೌದ್ ನಮ್ಗೂ ಯಾರಾದ್ರು ತ್ವಾಟ್ ಮಾಡಿ ಇಟ್ಟಿದ್ರೆ, ನಾವ್ ಅಡಿಕೆ ಬೆಳಕ್ನಿದ್ವಿ. ನಿಮ್ಮನಿಗೆ ಎಂತಕೆ ಕೆಲ್ಸಕ್ಕೆ ಬರ್ತಿದ್ದೊ. ಯಾಕ್ ನಿಮ್ಮನೆ ಬಾಗಿಲಿಗೆ ಬಂದು ಗೊಬ್ರ ಹೊರ್ತಿದ್ವಿ. ಸಂಬ್ಳ ಹೆಚ್ ಮಾಡಿರೆ ಇರ್ತಿವಿ. ಇಲ್ಲ ಹೊತಿವಿ. ಇಲ್ ಇಲ್ಲ ಅಂದ್ರೆ ಬ್ಯಾರಾರ್ ಮನಿಗೆ ಐತಿ. ಸಾಯ ತನಕ ನಿಮ್ಮನೆಗೆ ಮಾಡ್ತಿವಿ ಅಂತೆನೂ ಬರ್ದ್ ಕೊಡ್ಲ. ನನ್ನ ಲೆಕ್ಕಚಾರ ಮಾಡಿ. ನಾನು ಇನ್ನು ನಿಮ್ಮನಿ ಕೆಲ್ಸ ಮಾಡಲ್ಲ' ಎಂದು ಬರಬರನೇ ಚಿಟ್ಟೆಯಲ್ಲಿ ಕುಳಿತಿದ್ದ ಬೊಮ್ಮ, ಟವೆಲ್ ಕುಡುಗುತ್ತ ಮೇಲೆದ್ದು ನಿಂತಿದ್ದ.

ಬೊಮ್ಮನ ಅನಿರೀಕ್ಷಿತ ಆವೇಶಕ್ಕೆ ಹೆಗಡೆಯವರಿಗೆ ಏನು ಮಾತಾಡಬೇಕೆಂದು ತಿಳಿಯಲಿಲ್ಲ. ಬೊಮ್ಮ ದೇವರ ವಿಚಾರವನ್ನು ತಂದಿದ್ದಕ್ಕೆ, ನಿಮ್ಮ ಅಗತ್ಯವಿಲ್ಲ ಎಂದಿದ್ದಕ್ಕೆ ಹೆಗಡೆಯವರು ಕ್ರುದ್ಧರಾಗಿದ್ದರೂ ಹಳ್ಳಿಗಳಲ್ಲಿ ಕೆಲಸಗಾರರೇ ಸಿಗದಿರುವುದಕ್ಕೆ ಬೊಮ್ಮನನ್ನು ಎದುರು ಹಾಕಿಕೊಳ್ಳುವಂತಿರಲಿಲ್ಲವಾದ ಕಾರಣಕ್ಕೆ ಸುಮ್ಮನಿದ್ದರು. ಅವನ ಸಿಟ್ಟು, ಸೆಡವು ಹೆಗಡೆಯವರಿಗೆ ಹೊಸತೂ ಆಗಿರಲಿಲ್ಲ.ಆದರೆ ಬೊಮ್ಮ ಮಾತ್ರ ಈ ಸಲ ಶಾಂತನಾಗಿರಲಿಲ್ಲ. ತನ್ನ ಆತ್ಮಾಭಿಮಾನಕ್ಕೆ ಧಕ್ಕೆಯಾಗಿ ಮನಸ್ಸಿನಲ್ಲಿ ಕುದಿಯುತ್ತಿದ್ದುದ್ದರಿಂದ ಯಾರು ಏನು ಹೇಳಿದರೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಬೊಮ್ಮ ಅಷ್ಟು ಗಟ್ಟಿಯಾಗಿ ಪಟ್ಟು ಹಿಡಿದಿದ್ದು ಎಂದೂ ಹೆಗಡೆಯವರೂ ನೋಡಿರಲಿಲ್ಲ. ಸಂಬಳ ಹೆಚ್ಚಿಸುವೆ ಎಂದು ಹೇಳಿದರೂ ಕೂಡ ಬೊಮ್ಮ ತಾನು ನಿಮ್ಮ ಮನೆಯಲ್ಲಿ ಕೆಲಸ ಮಾಡುವುದಿಲ್ಲ ಎಂದು ಹಠಕ್ಕೆ ಬಿದ್ದಿದ್ದರಿಂದ ಅವರಿಗೆ ಬೇರೆ ದಾರಿ ಕಾಣಿಸಿರಲಿಲ್ಲ. ತಕ್ಷಣವೇ ಜಗುಲಿಯ ಮೇಜಿನ ತಮ್ಮ ಡ್ರಾಯರ್ ಗೆ ಕೈ ಹಾಕಿ, ಲೆಕ್ಕದ ಪುಸ್ತಕ ತೆಗೆದು ಬೊಮ್ಮನ ಆಳಿನ ಲೆಕ್ಕಚಾರ, ಅವನು ಮುಂಗಡ ತೆಗೆದುಕೊಂಡಿದ್ದು, ತೆಂಗಿನ ಕಾಯಿ, ಹಗ್ಗ ಹುರಿ ತೆಗೆದುಕೊಂಡಿದ್ದು ಎಲ್ಲವನ್ನು ಸೇರಿಸಿ ಲೆಕ್ಕಚಾರವನ್ನು ಮಾಡಿ, ಸಾವಿರದ ನಾನೂರು ರೂಪಾಯಿ ಅವನ ಕೈಗಿತ್ತು ಲೆಕ್ಕ ಚುಕ್ತಾ ಮಾಡಿಬಿಟ್ಟಿದ್ದರು. ಸಿಟ್ಟಿನಲ್ಲಿದ್ದ ಹೆಗಡೆಯವರು ಮತ್ತೆ ಒಂದೂ ಮಾತನಾಡದೆ ಮನೆಯ ಒಳಕ್ಕೆ ನಡೆದಿದ್ದರು. ಹೆಗಡೆಯವರ ಈ ನಡೆ ಬೊಮ್ಮನಿಗೆ ಒಮ್ಮೆಗೆ ಆಘಾತವಾಯಿತು. ಏನೋ ಅಂದುಕೊಂಡು ಹೇಳಿದ್ದು ಇನ್ನೇನೋ ಆಗಬಹುದೆಂದು ಅವನೂ ಊಹಿಸಿರಲಿಲ್ಲ. ಬೊಮ್ಮನಿಗೆ ಇನ್ನು ತಾನು ಏನೂ ಮಾತನ್ನಾಡುವುದಕ್ಕೆ ಉಳಿದಿಲ್ಲ ಎಂದೆನಿಸಿತು. ಆ ಕಡೆ ಈ ಕಡೆ ನೋಡುತ್ತ ಅವನು ಹೊರಡುವುದಕ್ಕೆ ಅಣಿಯಾದ. ಆ ಕ್ಷಣದಲ್ಲಿ